ಈ ಕಾಮಗಾರಿಗೆ ಸಂಬಂಧಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರು ಹೊಸದಾಗಿ ಸಿಮೆಂಟ್ ಕಾಂಕ್ರೀಟ್ ಸೇತುವೆಯನ್ನು ನಿರ್ಮಿಸುವ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸುತ್ತಿದ್ದಾರೆ. ಈ ಪ್ರಸ್ತಾವೆಯು ಸರ್ಕಾರಕ್ಕೆ ಬಂದ ಕೂಡಲೇ ಈ ಕಾಮಗಾರಿಗೆ ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

(9) ರಾಯಬಾಗ್ ತಾಲ್ಲೂಕಿನ ಕುಡಚಿ ಪುರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸೌಕರ್ಯದ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕುಡಚಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಜನರಿಗೆ ಹೇಳತೀರದಷ್ಟು ಕುಡಿಯುವ ನೀರಿನ ತೊಂದರೆಯಾಗಿದೆ. ಕುಡಚಿ ಪಟ್ಟಣಕ್ಕೆ ಸುಮಾರು ವರ್ಷಗಳ ಹಿಂದೆ ಕೃಷ್ಣಾನದಿಯಿಂದ ಕುಡಿಯುವ ಯೋಚನೆ ಮಾಡಲಾಗಿದೆ. ಆದರೆ ಜನಸಂಖ್ಯೆಯ ಹೆಚ್ಚಳದಿಂದ ಹಾಗೂ ಬಹುದಿನಗಳ ಹಿಂದೆ ಕಾರ್ಯರೂಪಕ್ಕೆ ಬಂದಿರುವ ಕುಡಿಯುವ ನೀರಿನ ಯೋಜನೆ ಜನರ ಬೇಡಿಕೆಯಂತೆ ನೀರು ಪೂರೈಕೆಯಾಗಲು ಅಸಾಧ್ಯಗೊಂಡಿದೆ. ಈ ವಿಷಯವನ್ನು ಈ ಹಿಂದೆ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತರಲಾಗಿದೆ. ಕರ್ನಾಟಕ ನೀರು ಸಗಬರಾಜು ಮಂಡಲಿಯಿಂದ ವಿಶೇಷವಾದಂಥ ಯೋಜನೆಯನ್ನು ರೂಪಿಸಿ ಜನರಿಗೆ ಆಗುತ್ತಿರುವ ನೀರಿನ ತೊಂದರೆಯನ್ನು ಖಾಯಂ ತ್ವರಿತವಾಗಿ ಬಗೆಹರಿಸುವಂತೆ ನಗರಾಭಿವೃದ್ಧಿ ಮಂತ್ರಿಗಳು ಆದೇಶವನ್ನಿತ್ತು ಹಾಗೂ ಬರಗಾಲ ಕಾಮಗಾರಿಯಲ್ಲಿ ಹೆಚ್ಚಿನ ಹಣಕಾಸಿನ ನೆರವು ನೀಡಿ ಪಟ್ಟಣ ಪ್ರದೇಶದಲ್ಲಿ ಆಳವಾದಂಥ ಕೊಳವೆ ಬಾವಿಗಳನ್ನು ತೋಡಿ ನೀರಿನ ಬವಣೆಯನ್ನು ದೂರ ಮಾಡಲು ಒತ್ತಾಯಿಸುತ್ತೇನೆ ಹಾಗೂ ವಿವರವಾದಂಥ ಹೇಳಿಕೆಯನ್ನು ಸದನದಲ್ಲಿ ನೀಡುವಂತೆ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ) : ಸನ್ಮಾನ್ಯ ಅಧ್ಯಕ್ಷೆಯವರೇ,

1981ರ ಜನಗಣತಿಯ ಪ್ರಕಾರ ಕುಡಚಿ ಪಟ್ಟಣದ ಜನಸಂಖ್ಯೆಯು 18,491 ಆಗಿದ್ದು ಹಾಗೂ ಈಗಿನ ಜನಸಂಖ್ಯೆಯು ಸುಮಾರು 25,000 ಆಗಿರಬಹುದು. ಹಾಲಿ ನೀರು ಸರಬರಾಜು ಕೃಷ್ಣಾ ನದಿಯಿಂದ ಆಗುತ್ತಿದೆ. ಬೇಸಿಗೆಯಲ್ಲಿ ಕೃಷ್ಣಾ ನದಿಯು ಬತ್ತಿಹೋಗುತ್ತದೆ. ಆದರೂ ಈ ನದಿಯ ಕಣಿವೆಯಲ್ಲಿ ಅಗೆದಿರುವ ಎರಡು ತೆರದ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಹಾಲಿ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲು 41.40 ಲಕ್ಷ ರೂಪಾಯಿಗಳ ಒಂದು ರೇಖಾ ಅಂದಾಜನ್ನು ತಯಾರಿಸಲಾಗಿದೆ. ಹಾಗೂ ವಿವರವಾದ ಸರ್ವೆ ಮಾಡಿ ಅಂದಾಜು ಮತ್ತು ನಕ್ಷೆಗಳನ್ನು ತಯಾರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಬರಗಾಲ ಕಾಮಗಾರಿಯಲ್ಲಿ ಜಿಲ್ಲಾಧಿಕಾರಿಗಳು 4 ಕೊಳವೆ ಬಾವಿಗಳನ್ನು ತೋಡಲು ಇತ್ತೀಚೆಗೆ ಮಂಜೂರು ಮಾಡಿದ್ದಾರೆ.

(10) ಆಕ್ಟಾಯ್ ಜಾರಿಗೊಳಿಸುವ ಬಗ್ಗೆ ಇರುವ ವಿವಾದದ ಬಗ್ಗೆ

ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಅಧ್ಯಕ್ಷರೇ, ಆಕ್ಟಾಯ್‌ನ್ನು ಮತ್ತೆ ಜಾರಿಗೆ ತರುವ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ವರ್ತಕರಲ್ಲಿ ಗೊಂದಲ ಉಂಟಾಗಿದೆ. ಆಕ್ಟಾಯ್ ಪದ್ಧತಿಯನ್ನು ರದ್ದುಪಡಿಸುವ ಸಂದರ್ಭದಲ್ಲಿ ಸರ್ಕಾರವು ಹಲವಾರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಒಂದು ನಿರ್ಣಯವನ್ನು ಮಾಡಿದೆ. ಈಗ ಆಕ್ಟಾಯ್ ಪದ್ಧತಿಯನ್ನು ಮತ್ತೆ ಇದ್ದಕ್ಕಿದ್ದಹಾಗೆ ಜಾರಿಗೆ ತರುವುದಕ್ಕೆ ಬದಲಾಗಿ ಈ ಸದನ ಹಾಗೂ ಮೇಲ್ಮನೆಯ ಸದಸ್ಯರುಗಳನ್ನೊಳಗೊಂಡ ಜಂಟಿ ಸಲಹಾ ಸಮಿತಿಯನ್ನು

ನೇಮಿಸಿ ಅದರ ವರದಿ ಬಂದ ನಂತರ ಈ ಆಕ್ಟ್ರಾಯ್ ಪದ್ಧತಿಯನ್ನು ಮತ್ತೆ ಜಾರಿಗೆ ತರಬೇಕೇ ಬೇಡವೇ ಎಂಬುದನ್ನು ನಿರ್ಧರಿಸಬೇಕೆಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆಯು ಈ ರೀತಿ ಇದೆ.

ರಾಜ್ಯದ ಸಿಟಿ ಕಾರ್ಪೊರೇಷನ್ಗಳು, ನಗರ ಮತ್ತು ಪುರಸಭೆಗಳು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿ ದಿನಾಂಕ : 01-04-1979ರಿಂದ ರದ್ದುಪಡಿಸಲಾಗಿರುವ ಆಕ್ಟ್ರಾಯ್ ವಸೂಲಿ ಪದ್ಧತಿಯನ್ನು ಪುನಃ ಜಾರಿಗೆ ತರುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು, ಯೋಜನೆ ಇಲಾಖೆಯ ಆಯುಕ್ತರು ಮತ್ತು ಕಾರ್ಯದರ್ಶಿಗಳು, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳನ್ನೊಳಕೊಂಡ ಸಮಿತಿಯನ್ನು ರಚಿಸಲಾಗಿದ್ದು ಅದರ ವರದಿಯನ್ನು ಪಡೆದು ಪರಿಶೀಲಿಸಲಾಗುವುದು. ನಂತರ ಸದನದ ಸಮಿತಿ ರಚಿಸಬೇಕೆಂಬ ಬಗ್ಗೆ ತೀರ್ಮಾನಿಸಲಾಗುವುದು.

ಶ್ರೀಮತಿ ಚಂದ್ರಪ್ರಭಾ ಅರಸ್ : ಸನ್ಮಾನ್ಯ ಅಧ್ಯಕ್ಷಿಣಿಯರೇ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ನನ್ನ ಭಾಷಣವನ್ನು ಮುಂದುವರಿಸುತ್ತಾ....

ಬೆಂಗಳೂರಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರುಗಳ ಮುಷ್ಕರದ ಬಗ್ಗೆ ಪ್ರಸ್ತಾಪ

ಶ್ರೀ ಪಿ.ಜಿ.ಆರ್. ಸಿಂಧ್ಯ : ಒಂದು ಬಹಳ ಮುಖ್ಯವಾದ ಪ್ರಶ್ನೆ ಇದೆ. ಬೆಂಗಳೂರು ನಗರದಲ್ಲಿರತಕ್ಕ ಸರ್ಕಾರಿ ಆಸ್ಪತ್ರೆಗಳಾದ ವಿಕ್ಟೋರಿಯಾ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗಳಲ್ಲಿ ಎಮರ್ಜೆನ್ಸಿ ನಿನ್ನೆಯಿಂದ ಡಾಕ್ಟರುಗಳು ಕೆಲಸ ಮಾಡಿಲ್ಲವೆಂದು ಪತ್ರಿಕೆಯಲ್ಲಿ ಬಂದಿದೆ. ಮತ್ತೆ ರಾಜ್ಯದಲ್ಲಿರತಕ್ಕ ಬಳ್ಳಾರಿಯಲ್ಲಿ, ಮೈಸೂರಿನಲ್ಲಿ, ಹುಬ್ಬಳ್ಳಿಯಲ್ಲಿರತಕ್ಕ ಆಸ್ಪತ್ರೆಗಳೂ ಬಂದ್ ಆಗಿವೆಯೆಂದು ಬಂದಿದೆ. ಈ ಆಸ್ಪತ್ರೆಗಳ ಸರ್ಕಾರಿ ವೈದ್ಯರುಗಳು ಮುಷ್ಕರ ಮಾಡುತ್ತಿದ್ದಾರೆಂದೂ ಪತ್ರಿಕೆಗಳಲ್ಲಿ ಬಂದಿದ್ದು, ಈ ಬಗ್ಗೆ ಮಾನ್ಯಸಚಿವರು ಇದ್ದಾರೆ, ಏನಾದರೂ ಹೇಳುವುದಿದ್ದರೆ, ದಯಮಾಡಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ : ಎಲ್ಲಾ ಕಡೆ ವೈದ್ಯರುಗಳ ಮುಷ್ಕರದಿಂದ ಜನರಿಗೆ ತೊಂದರೆಯಾಗಿದೆ. ಮತ್ತೆ 11ನೇ ತಾರೀಖಿನಿಂದ ವೈದ್ಯ ಶಿಕ್ಷಕರು ಸಹಿತ ಮುಷ್ಕರ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿನ್ನೆ ಮತ್ತು ಮೊನ್ನೆಯಿಂದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಾಕ್ಟರುಗಳು ಕೆಲಸ ಮಾಡುತ್ತಿಲ್ಲವೆಂಬ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಮತ್ತೆ 11ನೆ ತಾರೀಖಿನಿಂದ ಬಹಳ ದೊಡ್ಡ ಪ್ರಮಾಣದಲ್ಲಿ ರಾಜ್ಯಾದ್ಯಂತ ಚಳುವಳಿ, ಸತ್ಯಾಗ್ರಹ ಮಾಡಬೇಕೆಂದು ಹೊರಟಿದ್ದಾರೆ. ಅವರನ್ನು ಕರೆಸಿ ಮಾತುಕತೆ ನಡೆಸಿದ್ದೀರಾ, ಸರ್ಕಾರದ ನೀತಿ ಏನು, ನಿಲುವು ಏನು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಸಚಿವರ ಗಮನವನ್ನು ಸೆಳೆಯುತ್ತೇನೆ. ಏಕೆಂದರೆ, ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ, ಆಸ್ಪತ್ರೆಗಳಲ್ಲಿ ಶೋಚನೀಯ ಪರಿಸ್ಥಿತಿ ಉದ್ಭವವಾಗಿದೆ. ಮಾನ್ಯ ಸಚಿವರು ಈ ಪರಿಸ್ಥಿತಿಯನ್ನು ಬಗೆಹರಿಸುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಸಭೆಗೆ ತಿಳಿಸಬೇಕೆಂದು ಕೇಳುತ್ತೇನೆ.